ಎರಡು, ಧ್ಯಾನದಲ್ಲೂ ವೆರೈಟಿಯಿದೆಯೆಂದು ಟ್ರೈನೀಗಳಿಗೆ ಗೊತ್ತಿರಲಿಲ್ಲ.

ಮೂರು, ಮಾರ್ಗದರ್ಶಕರು ಇಂಥದ್ದೊಂದು ಇಕ್ಕಟ್ಟಿಗೆ ಈವರೆಗೆ ಸಿಲುಕಿರಲಿಲ್ಲ.

'ನೀನು ಏನನ್ನು ಹೇಳುತ್ತಿದ್ದೀಯೆ? ಅತೀಂದ್ರಿಯಧ್ಯಾನದ ಪ್ರಯೋಜನಗಳ ಬಗ್ಗೆ ಅಮೆರಿಕದಲ್ಲಿ ನಡೆಸಿದ ಸೈಂಟಿಫಿಕ್ ರಿಸರ್ಚ್‌ನ ಕ್ಯಾಸೆಟ್ಟು ನೀನು ನೋಡಿಲ್ಲವೆನ್ನಿಸುತ್ತದೆ. ಇಂಥದ್ದೊಂದು ಧ್ಯಾನ ವಿಶ್ವದಲ್ಲಿ ಎಲ್ಲೂ ಇಲ್ಲ. ಮಧ್ಯಾಹ್ನದ ಮೇಲೆ ಆ ಕ್ಯಾಸೆಟ್ಟು ಹಾಕುತ್ತೇನೆ. ಆಮೇಲೆ ನಿನ್ನಲ್ಲಿ ಇಂತಹ ರಬ್ಬಿಶ್ ಸಂದೇಹಗಳೇ ಮೂಡುವುದಿಲ್ಲ.'

ಮಧ್ಯಾಹ್ನದ ಬಳಿಕ, ನಾನು ಪ್ರಶ್ನೆ ಕೇಳಿದ ಪಾಪಕ್ಕೆ ಪ್ರಾಯಶ್ಚಿತದ ರೂಪದಲ್ಲಿ, ಅತೀಂದ್ರಿಯ ಧ್ಯಾನದ ಪ್ರಯೋಜನಗಳು – ಪ್ರಯೋಗಗಳ ಮೂಲಕ ಎಂಬ ಕ್ಯಾಸೆಟ್ಟಿನ ಪ್ರದರ್ಶನವಾಯಿತು. ಅನೇಕ ಯಂತ್ರೋಪಕರಣಗಳ ಮತ್ತು ವಯರುಗಳ ದೊಡ್ಡ ಜಾಲವೇ ಇರುವ ವಿಶಾಲವಾದ ಲ್ಯಾಬೊರೇಟರಿಯಲ್ಲಿ ನಾಲ್ಕು ಜನ ಬಿಳಿ ಚರ್ಮಿಯರು ಕಣ್ಣು ಮುಚ್ಚಿ ಆಸನಗಳಲ್ಲಿ ಕೂತಿದ್ದರು. ಅವರ ದೇಹದ ಎಲ್ಲಾ ಭಾಗಗಳಿಗೆ ವಯರುಗಳನ್ನು ಕನೆಕ್ಟ್ ಮಾಡಲಾಗಿತ್ತು. ಪ್ರತಿಯೊಂದು ವಯರಿಗೆ ಒಂದರಂತೆ ಸಂಪರ್ಕ ಯಂತ್ರಗಳಿದ್ದವು. ಆಯಾ ಯಂತ್ರಗಳ ಸ್ವಿಚ್ಚು ಹಾಕಿದಾಗ ಯಂತ್ರದಲ್ಲಿ ಸಂಕೇತಗಳೂ ಅಕ್ಷರಗಳೂ ಮೂಡುತ್ತಿದ್ದವು. ವೀಡಿಯೋದಲ್ಲಿ ಅವುಗಳಿಗೆ ಭರ್ಜರಿಯಾದ ವೀಕ್ಷಕ ವಿವರಣೆಯೂ ಇತ್ತು.

'ಈಗ ನಾಡಿಮಿಡಿತ ನಿಧಾನವಾಯಿತು. ಎದೆಬಡಿತ ಮೂಲ ಸ್ಥಾಯಿಗೆ ಬಂತು. ಶ್ವಾಸೋಚ್ಛ್ವಾಸ ನಿಯಂತ್ರಿತವಾಯಿತು. ಮಿದುಳಿನ ಚಟುವಟಿಕೆ ಕಡಿಮೆಯಾಯಿತು. ನಮ್ಮ ದೇಹದ ವಿವಿಧ ಭಾಗಗಳ ಕೆಲಸಗಳ ವೇಗ ಕಡಿಮೆಯಾದಷ್ಟೂ ನಮ್ಮ ಆಯುಸ್ಸು ಹೆಚ್ಚಾಗುತ್ತದೆ. ಈಗ ದೇಹ ಸುಷುಮ್ನ ಜಾಗೃತಾವಸ್ಥೆಯ ವಿಶ್ರಾಂತ ಸ್ಥಿತಿಯಲ್ಲಿದೆ. ಇದು ಇಡೀ ದೇಹದ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಬಿ.ಪಿ., ಶುಗರ್, ಹಾರ್ಟ್‌ಫೇಲ್‌ಗಳು ಆಗದಂತೆ ನೋಡಿಕೊಳ್ಳುತ್ತದೆ. ಬದುಕಿನ ಕಟ್ಟ ಕಡೆಯ ಕ್ಷಣದವರೆಗೂ ಯೌವನವನ್ನು ಉಳಿಸುತ್ತದೆ. ಅತೀಂದ್ರಿಯ ಧ್ಯಾನದಿಂದ ಚಿರಯೌವನ ದೊರೆಯುತ್ತದೆ. ಜೀವನವನ್ನು ಸರಿಯಾಗಿ ಅನುಭವಿಸಿ.'

ವೀಡಿಯೋ ಪ್ರದರ್ಶನದ ಬಳಿಕ ಇನ್ನೇನಾದರೂ ಸಂದೇಹ ಉಳಿದಿದೆಯೇ ಎಂಬಂತೆ ಮಾರ್ಗದರ್ಶಕ ನನ್ನನ್ನು ನೋಡಿದ. ನನ್ನಿಂದ ಪ್ರತಿಕ್ರಿಯೆ ಬಾರದಿರುವಾಗ ವಿಜಯದ ನಗೆ ನಕ್ಕ. ಅತೀಂದ್ರಿಯ ಧ್ಯಾನದಿಂದ ವಿಡಿಯೊದಲ್ಲಿ ಹೇಳಿದ ಎಲ್ಲಾ ಪರಿಣಾಮಗಳು ಆಗುವುದಿದ್ದರೆ ಉಳಿದ ಧ್ಯಾನ ಕ್ರಮಗಳಿಂದಲೂ ಆಗಲೇಬೇಕು. ಹಾಗಂತ ಇವನಲ್ಲಿ ವಾದಿಸಿ ಪ್ರಯೋಜನವೇನಿಲ್ಲ. ಭಾರತದ ಯೋಗ ಮತ್ತು ಧ್ಯಾನ ವಿದೇಶಗಳಲ್ಲಿ ಕಾರ್ಪೊರೇಟ್ ಜಗತ್ತನ್ನು ಪ್ರವೇಶಿಸಿದೆ. ಬರಿದೇ ತಿಂದು ಕುಡಿದು ಹೆಣ್ಣುಗಳ ಹಿಂದೆ ಕುಣಿಯುವುದಕ್ಕಿಂತ ಯಾವ



ಹೆಸರಿನ ಧ್ಯಾನವಾದರೂ ಉತ್ತಮವೇ. ಹಾಗಾಗಿ ನಾನು ಸುಮ್ಮನಾದೆ.

ಮುಂದಿನ ದಿನಗಳಲ್ಲಿ ನಮಗೆ ಒಂದಷ್ಟು ಯೋಗಾಸನ ಹೇಳಿಕೊಟ್ಟರು. ಯೋಗಾಸನದ ಬಳಿಕ ಧ್ಯಾನ ಮಾಡಬೇಕು. ಯೋಗವೆಂದರೆ ದೇಹ ಮತ್ತು ಮನಸ್ಸಿನ ಸಮತೋಲನವನ್ನು ಕಾಯ್ದುಕೊಳ್ಳುವುದು. ಆದುದರಿಂದ ಆ ಯೋಗಾಸನಗಳನ್ನು ನಾನು ದೂಸುರಾ ಮಾತಿಲ್ಲದೆ ಒಪ್ಪಿಕೊಂಡೆ.

ಆದರೆ ನಾನು ಕನಸಲ್ಲೂ ಊಹಿಸದ ಸಂಕಷ್ಟವೊಂದು ಎರಡನೇ ತಿಂಗಳಲ್ಲಿ ಕಾಣಿಸಿಕೊಂಡಿತು. ಒಂದು ದಿನ ಮಾರ್ಗದರ್ಶಕರು ಸುಮಾರು ಇಪ್ಪತ್ತೈದು ಪುಟಗಳ ಪ್ರಿಂಟೆಡ್ ಮೆಟೀರಿಯಲ್ಲು ಕೊಟ್ಟರು. ಒಂದು ವಾರದಲ್ಲಿ ಅದಷ್ಟನ್ನೂ ನಾವು ಬಾಯಿ ಪಾಠ ಒಪ್ಪಿಸಬೇಕು. ಬಾಯಿ ಪಾಠ ಒಪ್ಪಿಸಲಾಗದವರಿಗೆ ಕೋರ್ಸು ಸರ್ಟಿಫಿಕೇಟು ನೀಡಲು ಸಾಧ್ಯವಿಲ್ಲ. ಅದು ಈವರೆಗೆ ಸಂಸ್ಥೆ ಅನುಸರಿಸಿಕೊಂಡು ಬಂದ ನಿಯಮ. ಯಾವುದೋ ಹಾಡು ಎಂದಾದರೆ ಅದು ಲಡಕಾಸಾದರೂ ಏನಾದರೂ ರಾಗ ಹಾಕಿ ಹಾಡಿ ನೆನಪಿಟ್ಟುಕೊಳ್ಳಬಹುದು. ಅರ್ಥವಾಗದ ಸಂಸ್ಕೃತ ಶ್ಲೋಕಕ್ಕೂ ಗೇಯತೆ ಇರುವುದರಿಂದ ಉರು ಹೊಡೆಯಬಹುದು. ಇದು ಅಮೆರಿಕ, ಯೂರೋಪುಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ನಡೆಸಿದ ಪ್ರಯೋಗಗಳ ಫಲಿತಾಂಶ. ಅತೀಂದ್ರಿಯ ಧ್ಯಾನದ ಹುಟ್ಟು, ಉದ್ದೇಶ, ಬೆಳವಣಿಗೆ ಮತ್ತು ಮಹತ್ವದ ವರ್ಣನೆ. ಅವು ಅನುಭವಗಮ್ಯ ಎಂದಾದರೆ ನೆನಪಿಟ್ಟುಕೊಳ್ಳಬಹುದಿತ್ತು. ಇಪ್ಪತ್ತೈದು ಪುಟ ವ್ಯಾಪ್ತಿಯ ಬರಿಯ ಶಬ್ದಗಳನ್ನು ನೆನಪಿಟ್ಟುಕೊಳ್ಳುವುದಾದರೂ ಹೇಗೆ?

ರಾಘವ ಹೆಗ್ಡೆಯ ಸ್ಥಿತಿ ಚಿಂತಾಜನಕವಾಗಿತ್ತು. ಅವರು ಅಪೌರುಷೇಯ 'ಅಯ್ಯೀsssಂಗ್' ಬೀಜಮಂತ್ರವನ್ನೇ ಜೀರ್ಣಿಸಿಕೊಳ್ಳಲಾಗದವರು ಈಗ ಇಪ್ಪತ್ತೈದು ಪುಟಗಳ ಕಂತೆ ಪುರಾಣವನ್ನು ಉರು ಹೊಡೆದು ಒಪ್ಪಿಸಬೇಕಿತ್ತು!

ನಾವು ಸಮಾಲೋಚನೆ ನಡೆಸಿ ಮೂರು ತೀರ್ಮಾನಕ್ಕೆ ಬಂದೆವು:

ಒಂದು: ಇಪ್ಪತ್ತೈದು ಪುಟಗಳನ್ನು ಉರು ಹೊಡೆಯಲು ಏಳೇಳು ಜನ್ಮಗಳಲ್ಲೂ ನಮ್ಮಿಂದ ಸಾಧ್ಯವಿಲ್ಲ.

ಎರಡು: ನಮ್ಮನ್ನು ಒಂದು ವೇಳೆ ಯುರೋಪಿನಲ್ಲೋ ಅಮೆರಿಕದಲ್ಲೋ ಅತೀಂದ್ರಿಯ ಧ್ಯಾನದ ಮಾರ್ಗದರ್ಶಕರಾಗಿ ನೇಮಿಸಿದರೂ ನಮ್ಮ ಅನುಭವಕ್ಕೆ ನಿಲುಕದ ಪ್ರಯೋಜನಗಳನ್ನು ಬೇರೆಯವರಿಗೆ ವಿವರಿಸಿ ಹೇಳಲು ನಮ್ಮಿಂದಾಗದು.

ಮೂರು: ಅತೀಂದ್ರಿಯ ಧ್ಯಾನಕ್ಕೆ ಗ್ರಾಹಕರು ಬಂದರೆ ನಮಗೆ ಕೆಲಸ ಸಿಗಬಹುದು ಇಲ್ಲದಿದ್ದರೆ ನಾವು ನಿರುದ್ಯೋಗಿಗಳಾಗಿಯೇ ಜನ್ಮ ಕಳೆಯಬೇಕಾಗುತ್ತದೆ. ಧ್ಯಾನ ಮಾಡುತ್ತಾ!

ನಾವು ನಿರ್ಧಾರಕ್ಕೆ ಬಂದು ಶಿಬಿರ ನಿರ್ದೇಶಕರನ್ನು ಭೇಟಿ ಮಾಡಿದೆವು.

'ಸರ್, ಇದು ನಮ್ಮ ಬದುಕಿನ ಭವಿಷ್ಯದ ಪ್ರಶ್ನೆ. ನೀವು ನಿಜವನ್ನೇ ಹೇಳಬೇಕು. ಈ ಶಿಬಿರ ಮುಗಿದ ತಕ್ಷಣ ನಮಗೆ ಅಮೆರಿಕದಲ್ಲಿ ಕೆಲಸ ಸಿಗುತ್ತದಾ?'

'ಅದು ಸಂದರ್ಭವನ್ನು ಅವಲಂಬಿಸಿಕೊಂಡಿರುತ್ತದೆ. ಅಮೆರಿಕದವರು ಅತೀಂದ್ರಿಯ ಧ್ಯಾನ ತರಬೇತಿ ಬಯಸಿದರೆ, ನಾವು ಧ್ಯಾನ ಕೇಂದ್ರಗಳನ್ನು ತೆರೆಯುತ್ತೇವೆ. ಅಲ್ಲಿ ಅರ್ಹತೆಯ ಆಧಾರದಲ್ಲಿ ನಿರ್ದೇಶಕರನ್ನು ನೇಮಿಸುತ್ತೇವೆ. ಈಗಾಗಲೇ ತರಬೇತಾದವರು ನೂರು ಮಂದಿ ಇದ್ದಾರೆ. ಅವರದ್ದು ಆದ ಮೇಲೆ ನಿಮಗೆ ಅವಕಾಶ.'

ಏಕನಾಮಿಕ್ಸಿನ ನಾನು, ಸೈಕಾಲಜಿಯ ಹೆಗ್ಡೆ – ದೂರದ ಅಮೆರಿಕದ ಯಾವುದೋ ಅರೆಬರೆ ಕತ್ತಲೆ ಕೋಣೆಯಲ್ಲಿ ಕೂತು, ನಮ್ಮ ಇಂಗ್ಲಿಷ್ ಅರ್ಥವಾಗದ, ಯಾವ್ಯಾವುದೋ ಚಟಗಳ ದಾಸರಾಗಿರುವ, ಯುವಕರಿಗೋ ಯುವತಿಯರಿಗೋ ಜೀವಮಾನವಿಡೀ 'ಅಯ್ಯೀsssಂಗ್' ಬೀಜಮಂತ್ರ ಉಪದೇಶಿಸುವ ದೃಶ್ಯ ನನ್ನ ಕಣ್ಣ ಮುಂದೆ ಹಾದುಹೋಯಿತು.

ನಾನು ಪ್ರಾಮಾಣಿಕ ದನಿಯಲ್ಲೆಂದೆ. 'ನಮಗೆ ಅತೀಂದ್ರಿಯ ಧ್ಯಾನವನ್ನು ಸಿದ್ಧಿಸಲಾಗಲಿಲ್ಲ. ಇಪ್ಪತ್ತೈದು ಪುಟಗಳ ಮೆಟೀರಿಯಲ್ಲು ಏನು ಮಾಡಿದರೂ ಬಾಯಿಪಾಠ ಬರುತ್ತಿಲ್ಲ. ಕೆಲಸ ಸಿಗುತ್ತದೆಂಬ ನಂಬಿಕೆಯೂ ಅಲುಗಾಡಿ ಹೋಗಿದೆ. ನಾವಿನ್ನು ಇಲ್ಲಿ ಇರುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ. ಈ ಹಂತದಲ್ಲಿ ಶಿಬಿರ ಬಿಟ್ಟರೆ ನಿಮ್ಮ ಸಿಸ್ಟಮ್ಮಿಗೆ ಏನಾದರೂ ತೊಂದರೆಯಾಗುತ್ತದಾ ಸರ್?'

'ಯಾವ ತೊಂದರೆಯೂ ಆಗುವುದಿಲ್ಲ. ಆದರೂ ಇನ್ನೊಮ್ಮೆ ಯೋಚಿಸಿ ನೋಡಿ. ಮೂರು ತಿಂಗಳು ಮುಗಿಯದೆ ನಿಮಗೆ ಕೋರ್ಸು ಸರ್ಟಿಫಿಕೇಟು ನೀಡಲು ಮಾತ್ರ ಸಾಧ್ಯವಿಲ್ಲ. ನಿಮಗೆ ಈ ಕೋರ್ಸು ಇಷ್ಟವಿಲ್ಲದಿದ್ದರೆ ನಾನು ಒತ್ತಾಯಿಸುವುದಿಲ್ಲ.'

ನಾವು ಮತ್ತೆ ಆಲೋಚಿಸಲಿಲ್ಲ.

ಮರುದಿನ ನಿರ್ದೇಶಕರನ್ನು ಕಂಡು ವಿದಾಯ ಹೇಳಿ ತಿರುಪತಿ ಬಸ್ಸು ಹತ್ತಿದೆವು. ತಿರುಪತಿಯಿಂದ ಬೆಂಗಳೂರಿಗೆ. ತಿಮ್ಮಪ್ಪನ ಸಿಹಿ ಪೊಂಗಲೂಟದ ಋಣ ಅಲ್ಲಿಗೆ ಹರಿದುಹೋಯಿತು. ■